ಎಂದು ಹೇಳಲಾಗದು' ಎನ್ನುವುದು ಮೋತಿಲಾಲ್ ಓಸ್ವಾಲ್ ಫೈನಾನ್ಸಿಯಲ್ ಸರ್ವೀಸಸ್‌ನ ಅಭಿಪ್ರಾಯ.

'ಷೇರುಪೇಟೆಗಳ ಮೌಲ್ಯ ಕುಸಿಯಲು ಕಾರಣವಾಗುವ ಪ್ರತಿಕ್ರಿಯೆಯಿಂದ ಬಂಗಾರದ ಬೆಲೆ ಅಧಿಕವಾಗುತ್ತದೆ. ಅಲ್ಪಾವಧಿಯಲ್ಲಿ ಬೆಲೆಯ ಏರಿಳಿತ ಕಾಣಬಹುದಾದರೂ, ದೀರ್ಘಾವಧಿಯಲ್ಲಿ ಬಂಗಾರವು ತನ್ನ ಮೌಲ್ಯವನ್ನು ವೃದ್ಧಿಸಿಕೊಳ್ಳುತ್ತದೆ. ಜಾಗತಿಕ ಆರ್ಥಿಕ ಹಿಂಜರಿತದ ಭೀತಿ ಹಾಗೂ ಜಗತ್ತಿನ ಬಹುತೇಕ ದೇಶಗಳಲ್ಲಿನ ಲಾಕ್‌ಡೌನ್‌ನಿಂದಾಗಿ ಭೌತಿಕ ಚಿನ್ನದ ಕುಗ್ಗುವಿಕೆಯಾಗಿದೆ. ಇದು ಬಂಗಾರದ



ಚಿನ್ನದ ಮಾಸ್ಕ್ ಧರಿಸಿದ ಪುಣಾದ ಉದ್ಯಮಿ

## ಚಿನ್ನ ಪ್ರಿಯರಿಗಿದು ಸುವರ್ಣ ಕಾಲ



ಚಿನ್ನವು ವೈವಿಧ್ಯಮಯ ಬಂಡವಾಳ ಹೂಡಿಕೆಯ ಪ್ರಮುಖ ಭಾಗ. ಪ್ರತಿ ಹೂಡಿಕೆಗೆ ಆದರದ್ದೇ ಆದ ಅನುಕೂಲಗಳು ಮತ್ತು ಅನನುಕೂಲಗಳಿವೆ. ಚಿನ್ನವು ಜಾಗತಿಕ ಆರ್ಥಿಕತೆಯಲ್ಲಿನ ಅನೇಕ ಅಂಶಗಳನ್ನು ಅವಲಂಬಿಸಿದ್ದರಿಂದ ಅದರ ಬೆಲೆ ಏರಿಳಿತಗೊಳ್ಳುತ್ತದೆ. ಚಿನ್ನದ ಹೂಡಿಕೆಗೆ ಮುಂಚಿತವಾಗಿ ಅದರ ಸಮಯದ ಚೌಕಟ್ಟನ್ನು ಪರಿಗಣಿಸುವುದು ಅತಿ ಮುಖ್ಯ. ಜೊತೆಗೆ ಅದು ಹೇಗೆ ಕಾರ್ಯ ನಿರ್ವಹಿಸುತ್ತದೆ ಎಂಬುದನ್ನು ಅಧ್ಯಯನ ಮಾಡಬೇಕಾಗುತ್ತದೆ.

ಪ್ರಪಂಚದ ಪ್ರಮುಖ ಕೇಂದ್ರ ಬ್ಯಾಂಕ್‌ಗಳು ಬಡ್ಡಿದರವನ್ನು ತೀವ್ರವಾಗಿ ಇಳಿಸಿವೆ. ಇದರ ಹೊರತಾಗಿ ಮಾರುಕಟ್ಟೆಯಲ್ಲಿ ಲಿಕ್ವಿಡಿಟಿ ಒದಗಿಸುವ ಕ್ರಮ ಕೈಗೊಂಡಿವೆ. ಹೀಗಾಗಿ ಚಿನ್ನದ ಮೌಲ್ಯ ಕಡಿಮೆಯಾಗಲು ಅವಕಾಶವಿಲ್ಲ. ಹೀಗಾಗಿ 2020–21ರಲ್ಲಿ ಚಿನ್ನದ ಬೆಲೆ ಸಾರ್ವಕಾಲಿಕ ಗರಿಷ್ಠ ಮಟ್ಟವನ್ನು ಮುಟ್ಟಿದೆ. ಇದೇ ಪ್ರವೃತ್ತಿ 2021–22ರಲ್ಲೂ ಮುಂದುವರಿಯುವ ಸಾಧ್ಯತೆಯೂ ಇದೆ.

ಕೊರೊನಾ ವೈರಸ್ ಸಾಂಕ್ರಾಮಿಕ ರೋಗದಿಂದಾಗಿ ಜಾಗತಿಕ ಉತ್ಪಾದನೆ ಹಾಗೂ ಆರ್ಥಿಕತೆ ಹಿಂಜರಿತದಲ್ಲಿದೆ. ಇದು ಚಿನ್ನ ಖರೀದಿಸಲು ಸೂಕ್ತ ಸಮಯ. ಒಟ್ಟಿನಲ್ಲಿ ಷೇರು ಮಾರುಕಟ್ಟೆಗಳು ಕುಸಿತದಲ್ಲಿರುವಾಗ ಚಿನ್ನವನ್ನು ಸುರಕ್ಷಿತ ಹೂಡಿಕೆ ಎಂದು ಪರಿಗಣಿಸಲಾಗುತ್ತದೆ. ಅಂಥ ಸಂದರ್ಭದಲ್ಲಿ ಚಿನ್ನ ಸುರಕ್ಷಿತ ಜಾಲವಾಗಿಯೂ ಕಾರ್ಯ ನಿರ್ವಹಿಸುತ್ತದೆ.

ಪ್ರಸ್ತುತ ಹಣದುಬ್ಬರವು ಕಡಿಮೆಯಾಗುತ್ತಿದ್ದರೂ ಬಂಡವಾಳದ ಒಂದು ನಿರ್ದಿಷ್ಟ ಭಾಗವನ್ನು ಬಂಗಾರದಲ್ಲಿ ನಿಯೋಜಿಸುವುದು ಉತ್ತಮ. ಹೂಡಿಕೆದಾರರು ತಮ್ಮ ಬಂಡವಾಳದ ಶೇ. 10–20ರಷ್ಟು ಬಂಗಾರಕ್ಕೆ ಮೀಸಲಾಗಿಡಬಹುದು. ಹಣಕಾಸು ಗುರಿಗಳನ್ನು ತಲುಪಲು ಆಯಕಟ್ಟಿನ ಹಂಚಿಕೆಯಾಗಿ ಬಂಗಾರವನ್ನು ಖರೀದಿಸಬಾರದು. ವಿಶೇಷವಾಗಿ ಷೇರು ಮಾರುಕಟ್ಟೆಗಳ ಬೆಲೆಯೊಂದಿಗೆ ಬಂಗಾರದ ಬೆಲೆ ಚಲಿಸುವುದಿಲ್ಲ. ಉಳಿದ ಆಸ್ತಿ ವರ್ಗಗಳ ಬಂಡವಾಳ ಮಾರುಕಟ್ಟೆಯಲ್ಲಿ ಕೆಳ ಮಟ್ಟದಲ್ಲಿದ್ದಾಗ, ಆದಾಯದ ಸ್ಥಿರತೆಗಾಗಿ ಬಂಗಾರವನ್ನು ಖರೀದಿಸುವುದು ಉತ್ತಮ.

**–ಶಿವಾನಂದ ಪಂಡಿತ,** ತೆರಿಗೆ ಹಾಗೂ ಹಣಕಾಸು ಸಲಹೆಗಾರರು, ಗೋವಾ





### ಮಾರುಕಟ್ಟೆಯ ದಿಕ್ಕು ಊಹಿಸಲಾಗದು

ಅಂತರರಾಷ್ಟ್ರೀಯ ಮಾರುಕಟ್ಟೆ ಪೂರ್ಣ ಓಪನ್ ಆಗಿಲ್ಲ. ಹೂಡಿಕೆದಾರರು ಫಾರ್ಮಸಿ, ಕಚ್ಚಾ ತೈಲ, ಗೋಲ್ಡ್ ಯಾವುದರತ್ತ ಆಸಕ್ತಿ ತೋರುವರೋ ಗೊತ್ತಿಲ್ಲ. ಇನ್‌ಫ್ಲೋ ಕಡಿಮೆಯಿದೆ. ಹೀಗಾಗಿ ಚಿನ್ನದ ದರ ಏರಿಕೆಯಾಗುತ್ತಿದೆ. ಚಿನ್ನವನ್ನು ಸುರಕ್ಷಿತ ಹೂಡಿಕೆ ಎಂದು ಅನೇಕರು ಭಾವಿಸಿದ್ದಾರೆ.

**–ಡಾ. ಬಿ. ರಾಮಾಚಾರಿ,** ರಾಜ್ಯ ಆಭರಣ ವರ್ತಕರ ಸಂಘದ ಪ್ರಧಾನ ಕಾರ್ಯದರ್ಶಿ